ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, the 18th November, 1976/Karthika, 27, 1898.(S.E.)

The House met in the Assembly Chamber, Vidhana Soudha, at Nine of the Clock.

[MADAM SPEAKER (SMT. K. S. NAGARATHNAMMA) in the Chair.]

STARRED QUESTIONS
(to which oral answers were given)

Laying of railway line between Bellary and Gulbarga

9. SRI B. E. RAMAIAH (Siruguppa) — Will the Minister for Public Works be pleased to refer to his assurance given on the floor of the House on 16th December 1972 and state :

(a) the action taken by Government in pursuance of the promise for moving Central Government for laying of Railway line between Bellary and Gulbarga :

(b) the present stage of the matter ?

SRI M. MALLIKARJUNA SWAMY (Minister for Public Works).—

(a) The Goverment of India, Ministry of Railways, was addressed in the matter.

(b) The Government of India have expressed inability to undertake this line on grounds of paucity of founds and lack of adequate traffic justification.

ಶ್ರೀ ಬಿ. ಇ. ರಾಮಯ್ಯ.— ಸ್ವಾಮಿ, 1972ನೇ ಇಸವಿಯಲ್ಲಿ ಮಾನ್ಯ ಪಿ. ಡಬ್ಲ್ಯೂ. ಡಿ. ಸಚಿವರು ಬಳ್ಳಾರಿ ಹಾಗೂ ಗುಲ್ಬರ್ಗ ನಡುವೆ ರೈಲ್ವೆ ಮಾರ್ಗವನ್ನು ನಿರ್ಮಿಸುವ ಬಗ್ಗೆ ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ಆದಷ್ಟು ಜಾಗ್ರತೆ ಮಾರ್ಗವನ್ನು ಮಾಡಿಸುವುದಾಗಿ ಹೇಳಿದ್ದರು. ಆದರ ಇದುವರೆಗೂ ಆಗಿಲ್ಲ. ಇದಕ್ಕೆ ಕಾರಣ ಏನು ಸ್ವಾಮಿ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ಮಾನ್ಯ ಸದಸ್ಯರು ಯಾವ ರೈಲ್ವೇ ಮಾರ್ಗವನ್ನು ಕೇಳಿದ್ದಾರೆ ಇದು ಸುಮಾರು 320 ಕಿಲೋ ಮೀಟರ್ ದೂರ ಆಗುತ್ತದೆ, ಇದಕ್ಕೆ ಖರ್ಚು ಸುಮಾರು 45 ಕೋಟಿ ರೂಪಾಯಿ ತಗಲುತ್ತದೆ. ಹೊಸದಾಗಿ ರೈಲ್ವೇ ಮಾರ್ಗವನ್ನು ಅಥವಾ ಕನ್ವರ್ಷನ್

†Asterisks indicate that remarks or speeches have not been revised by the member concerned.

ಮಾಡುವ ರೀತಿಯಲ್ಲಿ ಕೇಂದ್ರ ಸರ್ಕಾರದವರು ಒಂದು ಪಾಲಿಸಿ ಸ್ಟೇಟ್‌ಮೆಂಟ್‌ನ್ನು ಮಾಡಿದ್ದಾರೆ. 1972ರಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಬರೆದ ಪತ್ರಕ್ಕೆ 22-9-1973 ರಲ್ಲಿ ಈ ರೈಲ್ವೆ ಮಾರ್ಗವನ್ನು ಮಾಡುವುದು ಕಷ್ಟ ಎಂದು ಬರೆದಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.— ಇತರ ರಾಜ್ಯಗಳಲ್ಲಿ ಆಗಿರುವ ರೈಲ್ವೆಮಾರ್ಗದೊಂದಿಗೆ ನಮ್ಮ ರಾಜ್ಯದಲ್ಲಿ ಆಗಿರುವ ರೈಲ್ವೆ ಮಾರ್ಗವನ್ನು ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಅತಿ ಕಡಿಮೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ನಮ್ಮ ರಾಜ್ಯದಲ್ಲೆ ಏನು ಇಡೀ ದಕ್ಷಿಣ ಇಂಡಿಯಾದಲ್ಲೇ ಕಡಿಮೆ ಎಂಬುದು ಗೊತ್ತು.

ಶ್ರೀ ಬಿ. ಇ. ರಾಮಯ್ಯ.— ಸ್ವಾಮಿ, ನಮ್ಮಲ್ಲಿ ಅಪ್ಪರ್ ಕೃಷ್ಣಾ ಮತ್ತು ತುಂಗಭದ್ರಾ ಪ್ರಾಜೆಕ್ಟ್ ಇರುವುದರಿಂದ ಇಲ್ಲಿ ರೈಲ್ವೆ ಮಾರ್ಗವನ್ನು ತಂದರೆ ಬಹಳ ಚೀಪ್ ಆಗುತ್ತದೆ. ಆದುದರಿಂದ ಕೇಂದ್ರಸರ್ಕಾರಕ್ಕೆ ಶಿಫಾರಸು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೇಂದ್ರ ಸರ್ಕಾರದೊಡನೆ ವ್ಯವಹಾರ ಮಾಡಬಹುದು ಆದರೆ ಇರುವ ವಿಷಯವನ್ನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್:—ಸ್ವಾಮಿ, 1973 ರಲ್ಲಿ ಕೇಂದ್ರಸರ್ಕಾರದವರು ತಮ್ಮ ಥೋರಣ್ ಏನಿದೆ ಎಂಬುದನ್ನು ತಿಳಿಸಿದ್ದರು. ಹಾಗೂ ದುಡ್ಡಿನ ಅಭಾವ ಇದೆಯೆಂದು ಪತ್ರವನ್ನು ಬರೆದಿದ್ದರು ಆದರೆ 1973 ನೇ ಇಸವಿ ಆದಮೇಲೆ ಕೂಡ ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ರೈಲ್ವೆ ಮಾರ್ಗವನ್ನು ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕೇರಳ, ತಿರುವೆಂದರಂ ಕಡೆಗಳಲ್ಲಿ ಅವರು ಮಾಡಿಲ್ಲವೆ ; ತಾವು ಸರಿಯಾಗಿ ಪ್ರಭಾವವನ್ನು ಕೇಂದ್ರಸರ್ಕಾರದ ಮೇಲೆ ಬೀರಿಲ್ಲ. ಪ್ರಭಾವವನ್ನು ಬೀರಿದ್ದರೆ ಅದು ಆಗುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ಕರಾವಳಿ ಪ್ರದೇಶದಲ್ಲಿ ಕೆಲವು ರೇವು ಪಟ್ಟಣಗಳಿಗೆ ವ್ಯಾಪಾರ ಅಭಿವೃದ್ಧಿ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ರೈಲ್ವೆ ಮಾರ್ಗಗಳನ್ನು ಮಾಡಿದ್ದಾರೆ. ಅವರ ಜೊತೆಯಲ್ಲಿ ಒಳ್ಳೆಯ ರೀತಿಯಿಂದಲೇ ವ್ಯವಹಾರ ಮಾಡೋಣ. ಇದನ್ನು ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಬಿ. ಇ. ರಾಮಯ್ಯ.— ಇನ್ನೂ ವ್ಯವಹಾರ ಮಾಡೋಣ ಎಂದೇ ಹೇಳುತ್ತಿದ್ದೀರಿ, ಇದು ಸುಮಾರು 20 ವರ್ಷಗಳಿಂದ ಪೆಂಡಿಂಗ್ ಇದೆ. ಈ ರೈಲ್ವೆ ಮಾರ್ಗವನ್ನು ಹಾಕುವ ಮೂಲಕ ಹಿಂದುಳಿದಿರತಕ್ಕ ಈ ಪ್ರದೇಶವನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ರೈಲ್ವೆ ಮಾರ್ಗವನ್ನು ಮಾಡಬೇಕಾದರೆ ಸುಮಾರು 45 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ನಾನು ಆಗಲೇ ಹೇಳಿದ್ದೇನೆ. ಆದರೂ ಈ ಮಾರ್ಗವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ.

Escape of Prisoners from Central Jail, Belgaum

89 SRI B. B. SAYANAK (Belgaum).—Will the Chief Minister be pleased to state :

(*a*) whether it is a fact that 3 Prisoners escaped from the Central Jail, Belgaum at midnight on 14th May 1976,

(*b*) if so, how they escaped ;

(*c*) whether it is a fact that the Jail authorities were receiving money order from the relatives of the prisoners who escaped ;